ಓ ಎಸ್ ನಂ. 17/2021
ಡಿ ಡಬ್ಲ್ಯು 2
ದಿನಾಂಕ 17-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿಗಳ ಪರಃ ಶ್ರೀ ಎಸ್ ಸಿ ಎನ್ ವಕೀಲರಿಂದಃ

ನಾನು ಹಾಜರುಪಡಿಸಿರುವ ನಿಡಿ-4 ರ ವಿಭಾಗ ಪತ್ರದಲ್ಲಿ "ಒಟ್ಟು ಕುಟುಂಬದ ಗಳಿಕೆಯ ಹಣ ಹಾಗೂ ಆಸ್ತಿ ವಿಭಾಗ ಮಾಡಿಕೊಳ್ಳುವುದು ಸೂಕ್ತವೆಂದು ತಿಳಿಸಿದ್ದನ್ನು ನಾವುಗಳು ವಿಮರ್ಶಿಸಿ ಸರಿ ಎಂದು ದೃಡ ಪಡಿಸಿಕೊಂಡು ಅದರಂತೆ ಒಟ್ಟು ಕುಟುಂಬದ ಆಸ್ತಿಯಾಗಿರುವ ಸದರಿ ಸ್ವತಿತನ ಮೇಲೆ ನಮ್ಮಗಳೆಲ್ಲರಿಗೂ ಸಮಾನವಾದ ಹಕ್ಕು ಇದ್ದು ನಮ್ಮಗಳ ಸಾಮೂಹಿಕ ಅನುಭವದಲ್ಲಿರುತ್ತದೆ" ಎಂದು ನಮೂದು  ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ದಾಖಲೆಯನ್ನು ನನ್ನ ತಂದೆ ಮೃತ ಪಟ್ಟ ನಂತರ ಮಾಡಿಕೊಂಡಿದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ "ನಮ್ಮ ಕುಟುಂಬದಲ್ಲಿ ವಿಭಾಗ ಮಾಡಿಕೊಳ್ಳುವ ಆಸ್ತಿ ಇನ್ನೂ ಯಾವುದು ಇರುವುದಿಲ್ಲ" ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಡಿ-4 ರ ವಿಭಾಗದಂತೆ ದಾವಾ ಶೆಡ್ಯೂಲ್ ಐಟಂ ನಂ.5 ರ ಆಸ್ತಿ ನನ್ನ ತಾಯಿಯಾದ ಕಾಳಮ್ಮರವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ಸದರಿ ದಾವಾ ಶೆಡ್ಯೂಲ್ ಐಟಂ

ನಂ.5 ರ ಆಸ್ತಿಯನ್ನು ನಾನು ನಿಡಿ-2 ರಂತೆ ದಿನಾಂಕ 19/08/2019 ರಂದು ಖರೀದಿ ಮಾಡಿರುತ್ತೇನೆ ಎಂದರೆ ಸರಿ. ನಿಡಿ-4 ರ ವಿಭಾಗದಲ್ಲಿ ನಾನು ಯಾವುದೇ ಆಸ್ತಿಯನ್ನು ಪಡೆದಿರುವುದಿಲ್ಲ ಎಂದರೆ ಸರಿ. ನಾನು ನ್ಯಾಯಾಲಯದಲ್ಲಿ ಹಾಜರಪಡಿಸಿರುವ ದಾಖಲೆ ನಿಡಿ-5 ರ ದಾಖಲೆ ವಾದಿಗಳ ತಾಯಿ ಸುಭದ್ರಮ್ಮರವರು ನನ್ನ ತಂದೆಯ ವಿರುದ್ಧ ಜೀವನಾಂಶಕ್ಕಾಗಿ ಹೂಡಿದ ಪ್ರಕರಣ ಎಂದರೆ ಸರಿ. ಸದರಿ ದಾವೆ ಹೂಡುವ ಪೂರ್ವದಲ್ಲಿಯೇ ನನ್ನ ತಂದೆ ವಾದಿಗಳ ತಾಯಿ ಸುಭದ್ರಮ್ಮರವರನ್ನು ಮನೆಯಿಂದ ಹೊರಗೆ ಹಾಕಿದ್ದರು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ಪ್ರತ್ಯೇಕವಾಗಿದ್ದರು ಎಂದು ನುಡಿಯುತ್ತಾರೆ. ಸದರಿ ದಾವೆಯ ಪ್ರಕಾರ ನನ್ನ ತಂದೆ ಸದರಿ ಸುಭದ್ರಮ್ಮರವರಿಗೆ ಶಾಶ್ವತ ಜೀವನಾಂಶವಾಗಿ 40 ಸಾವಿರ ರೂಗಳನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಜೀವನಾಂಶವನ್ನು ಕೊಟಿಟರುವುದನ್ನು ಹೊರತು ಪಡಿಸಿದರೆ ವಾದಿಗಳಿಗೆ ಯಾವುದೇ ರೀತಿಯ ಹಿಸ್ಸಾ ನೀಡಿರುವುದಿಲ್ಲ ಎಂದರೆ ಸಾಕ್ಷಿ ಆ ವಿಚಾರಗಳು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆ ಸಿದ್ದಪ್ಪರವರು ಸರ್ಕಾರಿ ನೌಕರಿಯಲ್ಲಿದ್ದಾಗ ತರೀಕೆರೆ ತಾಲ್ಲೂಕು, ಶಿವನಿ ಹೋಬಳಿ, ಬುಕ್ಕಾಂಬುದಿ ಗ್ರಾಮದಲ್ಲಿದ್ದರು ಎಂದರೆ ಸರಿ. ನಿಡಿ-1 ರ ಕ್ರಯಪತ್ರ ದಾವಾ

ಶೆಡ್ಯೂಲ್ ಐಟಂ ನಂ.4 ರ ಸ್ವತ್ತಿನ ದಾಖಲೆ ಎಂದರೆ ಸರಿ. ನಿಡಿ-1 ರ ದಾಖಲೆ ನೊಂದಣಿಯಾಗುವ ಕಾಲಕ್ಕೆ ಸುಭದ್ರಮ್ಮರವರು ನನ್ನ ತಂದೆ ಸಿದ್ದಪ್ಪರವರಿಂದ ಬೇರೆ ಇದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ದಿನಾಂಕ 15/11/2012 ರಂದು ನಿಡಿ-1 ರಂತೆ ಸದರಿ ಕ್ರಯಪತ್ರವಾಗುವ ಕಾಲಕ್ಕೆ ನನ್ನ ದೊಡ್ಡಮ್ಮ ಸುಭದ್ರಮ್ಮರವರು ಬದುಕಿರಲಿಲ್ಲ ಎಂದು ನುಡಿಯುತ್ತಾರೆ. ಮೇಲ್ಕಂಡ ದಿನಾಂಕದಂದು ನಾನು ತರೀಕೆರೆ ತಾಲ್ಲೂಕು, ಶಿವನಿ ಹೋಬಳಿ, ಬುಕ್ಕಾಂಬುದಿ ಗ್ರಾಮದಲ್ಲಿ ನನ್ನ ತಂದೆ ಜತೆ ವಾಸ ಇದ್ದೆ ಎಂದರೆ ಸಾಕ್ಷಿ ನನ್ನತಂದೆ ಸದರಿ ವಿಳಾಸದಲ್ಲಿ ವಾಸ ಇದ್ದರು, ಆದರೆ ಆ ಸಮಯದಲ್ಲಿ ದುಡಿಮೆಗಾಗಿ ಬೆಂಗಳೂರಿನಲ್ಲಿ ವಾಸ ಇದ್ದೆ ಎಂದು ನುಡಿಯುತ್ತಾರೆ. ನಿಡಿ-1 ರ ಕ್ರಯಪತ್ರದಲ್ಲಿ ನಾನು ವಾಸ ಇದ್ದ ಬೆಂಗಳೂರಿನ ವಿಳಾಸವನ್ನು ನಮೂದು ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನನ್ನ ಆಧಾರ್ ಕಾರ್ಡು ವಿಳಾಸ ಬುಕ್ಕಾಂಬುದಿ ಗ್ರಾಮದ್ದಾಗಿತ್ತು ಎಂದು ನುಡಿಯುತ್ತಾರೆ. ನಿಡಿ-1 ರ ಕ್ರಯಪತ್ರದಲ್ಲಿ ಆ ಸ್ವತ್ತನ್ನು ಖರೀದಿಸಲು ನನಗೆ ಹಣ ಎಲ್ಲಿಂದ ಬಂತು ಎಂದು ನಮೂದು ಮಾಡಲಾಗಿದೆಯಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರ. ನಿಡಿ-1 ರ ಕ್ರಯಪತ್ರವಾಗುವ ಕಾಲಕ್ಕೆ ನನ್ನ ತಂದೆ ಸರ್ಕಾರಿ ನೌಕರಿಯಲ್ಲಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆಯಿಂದ ಒಂದು ರೂಪಾಯಿಯ ಸಹಾಯವು ದೊರೆತ್ತಿಲ್ಲ ಎಂದು

ನುಡಿಯುತ್ತಾರೆ. ನನ್ನ ತಂದೆಯ ಹೆಸರಿನಲ್ಲಿ ಸದರಿ ಆಸ್ತಿಯನ್ನು ಖರೀದಿ ಮಾಡಿದರೆ ವಾದಿಗಳಿಗೂ ಸಹ ಪಾಲು ಕೊಡಬೇಕಾಗುತತದೆ ಎಂಬ ಕಾರಣದಿಂದ ನನ್ನ ತಾಯಿ ಕಾಳಮ್ಮರವರ ಚಿತಾವಣೆ ಮೇರೆಗೆ ಸದರಿ ಸ್ವತ್ತನ್ನು ನನ್ನ ತಂದೆ ನನ್ನ ಹೆಸರಿಗೆ ಖರೀದಿಸಿರುತ್ತಾರೆ ಎಂದರೆ ಸುಳ್ಳು. ಒಂದು ವೇಳೆ ನನ್ನ ಸ್ವಂತ ದುಡಿಮೆಯಿಂದ ನಿಡಿ-1 ರ ಕ್ರಯಪತ್ರದಲ್ಲಿರುವ ಆಸ್ತಿಯನ್ನು ಗಳಿಸಿದ್ದರೆ ನಿಡಿ-4 ರ ವಿಭಾಗಪತ್ರದಲ್ಲಿ ನಾನು ಸ್ವಂತವಾಗಿ ಗಳಿಸಿದ್ದ ಬಗ್ಗೆ ನಮೂದು ಮಾಡುತ್ತಿದ್ದೆ ಎಂದರೆ ಸಾಕ್ಷಿ ಹೇಳುತ್ತಿದ್ದೆ ಎಂದು ನುಡಿಯುತ್ತಾರೆ.

ದಾವಾ ಬಿ ಶೆಡ್ಯೂಲ್ ಎಲ್ ಐ ಸಿ ಪಾಲಿಸಿಗೆ ನಾನು ಒಬ್ಬನೇ ಗಂಡು ಮಗ ಎಂಬ ಕಾರಣದಿಂದ ನನ್ನನ್ನು ಮತ್ತು ನನ್ನ ತಾಯಿಯನ್ನು ನಾಮಿನಿಯಾಗಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪಾಲಿಸಿ ಮೊತ್ತದಲ್ಲೂ ಸಹ ವಾದಿಗಳಿಗೆ ಸಮಾನ ಹಿಸ್ಸಾ ಹಕ್ಕು ಇದೆ ಎಂದರೆ ಸರಿಯಲ್ಲ. ದಾವಾ ಎ ಶೆಡ್ಯೂಲ್ ಆಸ್ತಿಗಳೆಲ್ಲವೂ ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಎ ಶೆಡ್ಯೂಲ್ ಆಸ್ತಿಗಳು ನನ್ನ ತಂದೆಗೆ ಪಿತ್ರಾರ್ಜಿತವಾಗಿ ಹಾಗೂ ಅವರ ಜೀವಿತಾವಧಿಯಲ್ಲಿ ಅವರ ಸ್ವಂತ ದುಡಿಮೆಯಿಂದ ಗಳಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ನನಗೆ ದಾವಾ ಎ ಶೆಡ್ಯೂಲ್ ಐಟಂ ನಂ.4 ರಿಂದ 6 ರ ಸ್ವತ್ತುಗಳನ್ನು ಖರೀದಿಸಲು ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಎ ಮತ್ತು ಬಿ

ಆಸ್ತಿಗಳೆಲ್ಲವೂ ಕುಟುಂಬದ ಆಸ್ತಿಗಳಾಗಿರುವುದರಿಂದ ಅವುಗಳಲ್ಲಿ ವಾದಿಗಳಿಗೆ ಸಮಾನವಾದ ಹಕ್ಕು ಮತ್ತು ಹಿಸ್ಸೆ ಇದೆ ಎಂದರೆ ಸರಿಯಲ್ಲ. ವಾದಿಗಳಿಗೆ ಪಾಲು ಕೊಡಬೇಕಾಗುತ್ತದೆ ಎಂಬ ಕಾರಣದಿಂದ ನಾನು ಮತ್ತು ನನ್ನ ತಾಯಿ ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.